ರೆಲ್ಲರೂ ಕಡೆಯ ನದಿಯಲ್ಲಿ ಸ್ನಾನ ಮಾಡಿ, ಬಹಳಷ್ಟು ಕಾಲ ಆಟವಾಡಿ, ಸಿಹಿಯಾಗಿದ್ದ ನೀರನ್ನು ಕುಡಿದು ಉತ್ಸಾಹಗೊಂಡರು.

ಆ ಮೂವರೂ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಸೂರ್ಯಾಸ್ತದ ಹೊತ್ತಿಗೆ ಒಂದು ನಗರವನ್ನು ತಲುಪಿದರು. ಆ ನಗರಕ್ಕೆ ಅಸ್ತಿತ್ವವೇ ಇರಲಿಲ್ಲ. ಅಲ್ಲಿ ಮೂರು ಮನೆಗಳನ್ನು ಕಟ್ಟಿದರು. ಒಂದು ಮನೆಗೆ ಅಡಿಪಾಯವೇ ಇರಲಿಲ್ಲ. ಇನ್ನೊಂದಕ್ಕೆ ಗೋಡೆಗಳೇ ಇರಲಿಲ್ಲ. ಮೂರನೆಯದಕ್ಕೆ ಗೋಡೆಯಾಗಲಿ, ಮಾಡಾಗಲಿ ಇರಲಿಲ್ಲ. ಕಣ್ಣಿಗೇ ಕಾಣದ ನಗರದಲ್ಲಿ ಕಟ್ಟಿದ ಆ ಮೂರು ಸುಂದರವಾದ ಮನೆಗಳಲ್ಲಿ ಆ ಮೂವರು ರಾಜಕುಮಾರರೂ ಸುಖವಾಗಿ ಕಾಲಕಳೆಯುತ್ತಿದ್ದರು.

ಒಮ್ಮೆ ತಮ್ಮ ತಮ್ಮ ಮನೆಗಳಲ್ಲಿ ಅವರು ಮೂರು ಮಡಕೆಗಳನ್ನು ಕಂಡರು. ಮೊದಲ ಎರಡು ಮಡಕೆಗಳು ಎತ್ತಿದಾಗ ಚೂರುಚೂರಾಗಿ ಹೋದವು. ಮೂರನೆಯದು ಮುಟ್ಟಿದೊಡನೆಯೇ ಪುಡಿಪುಡಿಯಾಗಿ ಹೋಯಿತು. ಆ ಮಡಕೆಗಳಲ್ಲಿ ಪ್ರತಿಯೊಂದರಲ್ಲಿಯೂ ಅವರು, ಎಂಟು ಸೇರುಗಳಿಂದ ಹನ್ನೆರಡು ಸೇರುಗಳನ್ನು ಕಳೆದರೆ ಎಷ್ಟಾಗುವುದೋ ಅಷ್ಟು ಪ್ರಮಾಣದ ಅಕ್ಕಿಯನ್ನು ಹಾಕಿದರು. ನೀರು ಬೆಂಕಿಗಳಿಲ್ಲದೆಯೇ ಅದ್ಭುತವಾಗಿ ಅಡುಗೆ ಮಾಡಿದರು. ತಾವು ತಯಾರಿಸಿದ ಆಹಾರವನ್ನು ಬಾಯಿಯಿಲ್ಲದ, ನಾಲಗೆಯಿಲ್ಲದ ಮತ್ತು ಹಲ್ಲುಗಳೂ ಇಲ್ಲದ ಅಸಂಖ್ಯಾತ ಜನರಿಗೆ ಹಂಚಿದರು. ಉಳಿದ ಆಹಾರವನ್ನು ಹರ್ಷದಿಂದ ಸೇವಿಸಿದರು. ಸಾಯಂಕಾಲದ ಹೊತ್ತಿಗೆ ಅವರು ಕಾಡಿಗೆ ಬೇಟೆಗಾಗಿ ಹೋದರು. ಅಲ್ಲಿ ತಮ್ಮ ಸಮಯವನ್ನು ಆನಂದವಾಗಿ ಕಳೆದರು.

ಕಥೆ ಮುಗಿಯಿತು. ಕಥೆಯನ್ನು ಕೇಳಿದ ಮಗುವಿಗೆ ತುಂಬ ಸಂತೋಷವಾಯಿತು. ತಾಯಿ ಹೇಳಿದ್ದರಲ್ಲಿ ಪ್ರತಿಯೊಂದನ್ನೂ ಮಗು ನಂಬಿಬಿಟ್ಟಿತು.

ವಸಿಷ್ಠರು ಈ ವೃತ್ತಾಂತದ ಸಾರವನ್ನು ಹೀಗೆ ಹೇಳುತ್ತಾರೆ: ರಾಮ, ವಿವೇಕವಿಲ್ಲದ ಮತ್ತು ಆತ್ಮವಿಚಾರವನ್ನು ಮಾಡದ ಅಜ್ಞಾನಿಗಳು ಹೀಗೆಯೇ ಈ ಜಗತ್ತು ಸತ್ಯವೆಂದು ನಂಬಿಬಿಡುತ್ತಾರೆ. ಈ ಜಗತ್ತು ಎನ್ನುವುದು ಹೇಗಿದೆ ಗೊತ್ತೆ? ಇದು ಗಾಳಿಯಲ್ಲಿ ಕಟ್ಟಿದ ಕೋಟೆಯಂತೆ ಇದೆ. ತಾಯಿ ಹೇಳಿದ ಕಥೆಯಂತೆ ಈ ಜಗತ್ತೂ ಒಂದು ಕಾಲ್ಪನಿಕ ಸಂಗತಿ ಮಾತ್ರವೇ. ಅಸ್ತಿತ್ವವೇ ಇರದ ಸಂಗತಿಗಳಿಗೆ ಆ ತಾಯಿ ಹೆಸರು ಮತ್ತು ಆಕಾರಗಳನ್ನು ಕಲ್ಪಿಸಿ ತನ್ನ ಮಗನಿಗೆ ಹೇಳಿದಳು. ಇದೇ ರೀತಿ ನಮ್ಮ ಮನಸ್ಸು ಮಿಥ್ಯಾಜಗತ್ತಿನ ಕಣ್ಕಟ್ಟಿನ ವಸ್ತುಗಳಿಗೆ ಹೆಸರು ಮತ್ತು ರೂಪಗಳನ್ನು ಕಲ್ಪಿಸಿಕೊಳ್ಳುತ್ತದೆ.

ರಾಮ, ಈ ಜಗತ್ತು ಮನಸ್ಸಿನ ಸಂಕಲ್ಪ ಮಾತ್ರವೇ. ನಿನ್ನ ಮನಸ್ಸಿನ ಕಲ್ಪನೆಯನ್ನು ಬಿಟ್ಟು ಬೇರೆ ಯಾವುದಕ್ಕೂ 'ಇರುವಿಕೆ' ಎನ್ನುವುದು ಇಲ್ಲವೇ ಇಲ್ಲ. ಈ ಮಾನಸಿಕ ಕಲ್ಪನೆಯೇ ಸ್ವರ್ಗ, ಭೂಮಿ, ಆಕಾಶ, ವಾಯು, ನದಿಗಳು, ಪರ್ವತಗಳು, ಮರಗಳು ಮುಂತಾದ ಅದ್ಭುತವಾದ ವೈವಿಧ್ಯಮಯ ರೂಪಗಳನ್ನು ಪಡೆದುಕೊಳ್ಳುತ್ತದೆ.

ರಾಮ, ಸಂಕಲ್ಪವೆಂದರೆ ಮನಸ್ಸಿನ ವಿಕಾಸ. ಸಂಕಲ್ಪವೇ ತನ್ನ ಶಕ್ತಿಯಿಂದ ವೈವಿಧ್ಯತೆಯನ್ನು ಸೃಜಿಸುತ್ತದೆ. ಇಡೀ ಜಗತ್ತೇ ಸಂಕಲ್ಪಾತ್ಮಕವಾದುದು. ಸಂಕಲ್ಪವೇ ಮನಸ್ಸಿನ ಅತ್ಯಂತ ಕ್ರಿಯಾತ್ಮಕ ಶಕ್ತಿಯಾಗಿದೆ. ಆದ್ದರಿಂದ, ಓ ರಾಮ, ನಿನ್ನ ಮನಸ್ಸಿನಿಂದ ಎಲ್ಲ ರೀತಿಯ ಸಂಕಲ್ಪಗಳನ್ನೂ ಹೊರಕ್ಕೆ ದೂಡು. ಯಾವಾಗ ಮನಸ್ಸಿನಲ್ಲಿ ಯಾವ ರೀತಿಯ ಸಂಕಲ್ಪಗಳೂ ಇರುವುದಿಲ್ಲವೋ ಅಂಥ ನಿರ್ವಿಕಲ್ಪ ಸ್ಥಿತಿಯನ್ನು ಪಡೆ ಯುವುದಕ್ಕೆ ಸರ್ವಪ್ರಯತ್ನವನ್ನೂ ಮಾಡು.

ರಾಮ, ಈ ಜಗತ್ತು ಸತ್ಯ ಎನ್ನುವ ನಿನ್ನ ತಪ್ಪು ಭಾವನೆಯನ್ನು ಕೊಡಹಿಹಾಕು. ಎಲ್ಲ ರೀತಿಯ ಭ್ರಮೆಯನ್ನೂ ಅಸತ್ಯವಾದುದನ್ನೂ ಬಿಟ್ಟುಬಿಡು. ಅಮೃತವಾದ ಬ್ರಹ್ಮ ಅಂದರೆ ಸರ್ವವ್ಯಾಪಿಯಾದ ಆತ್ಮವೊಂದೇ ಎಲ್ಲದರ ಆಧಾರ ಮತ್ತು ಅವಲಂಬನವಾಗಿದೆ. ಹೀಗಾಗಿ ಇದೊಂದೇ ಸತ್ಯ. ಈ ಸತ್ಯವಸ್ತುವಿನ ವಿಚಾರದಲ್ಲಿ ನಿನ್ನನ್ನು ನೀನು ತೊಡಗಿಸಿಕೊ. ಹೇಗೆ ವಿಚಾರ ಮಾಡಬೇಕು, ಗೊತ್ತೆ? ನೀನು ಎಂದೂ ಬಂಧಿತನಾಗಿಲ್ಲ, ನೀನು ಎಂದೆಂದಿಗೂ ಮುಕ್ತನು. ಹೀಗಿರುವಾಗ ಜೀವ ಎನ್ನುವುದು ಎಲ್ಲಿ ತಾನೇ ಇದೆ? ಮನಸ್ಸು ಎನ್ನುವುದು ಎಲ್ಲಿ ತಾನೇ ಇದೆ? ಬಂಧನ ಎನ್ನುವುದು ಎಲ್ಲಿ ತಾನೇ ಇದೆ? ಬಂಧನವಿದ್ದರೆ ತಾನೇ ಸ್ವಾತಂತ್ರ್ಯ ಇರುವುದು? ಸಂಸಾರವಿದ್ದರೆ ತಾನೇ ಮುಕ್ತಿ ಎನ್ನುವುದು ಇರುವುದು? ಈ ವಿಧಾನದಲ್ಲಿ ವಿಚಾರ ಮಾಡಬೇಕು. ತಿಳಿದುಕೋ, ಬಂಧನ ಮತ್ತು ಮುಕ್ತಿ – ಇವೆರಡೂ ಮನಸ್ಸಿನ ಕಲ್ಪನೆಗಳು ಮಾತ್ರ.

ಈ ನಶ್ವರ ದೇಹಕ್ಕೂ, ನಿತ್ಯವಾದ ಆತ್ಮನಿಗೂ ಇರುವ ಸಂಬಂಧ ಏನು ಗೊತ್ತೆ? ಒಂದು ಮಡಕೆ ಮತ್ತು ಅದರೊಳಗಿನ ಆಕಾಶದ ಸಂಬಂಧ. ಈ ನಶ್ವರ ಪ್ರಪಂಚವು ನಮಗೆ ಸತ್ಯವೆಂದು ಕಾಣುತ್ತದೆ. ಈ ವಿಶ್ವದ ಕಲ್ಪನೆ ಇರುವವರೆಗೂ, ಅಜ್ಞಾನದ ನಿದ್ರೆಯಲ್ಲಿ ಬಿದ್ದುಕೊಂಡಿರುತ್ತೇವೆ. ಈ ಪ್ರಪಂಚದ ಅನುಭವವೆನ್ನುವುದೇ ಒಂದು ಸುದೀರ್ಘ ಸ್ವಪ್ನ.


ರಾಮ, ಈ ಜಗತ್ತೆಂಬುದು ಒಂದು ಘನಘೋರ ಅರಣ್ಯವಿದ್ದಂತೆ. ಅದರಲ್ಲಿ ವ್ಯಾಧಿ ಮತ್ತು ಮೃತ್ಯುಗಳೆಂಬ ಸರ್ಪಗಳು ತಾಂಡವವಾಡುತ್ತಿವೆ. ಮನಸ್ಸೇ ಈ ಕಾಡಿನ ಒಡೆಯ. ಅದು ನಮ್ಮನ್ನು ಎಣೆಯಿಲ್ಲದ ಕಂದಕಗಳಿಗೂ ಕಷ್ಟಗಳಿಗೂ ತಳ್ಳುತ್ತದೆ. ಜಗತ್ತೆಂಬ ಮಾನಸಿಕ ಭಾವನೆಯೇ ಈ ಜಗತ್ತಿನ ಅಸ್ತಿತ್ವಕ್ಕೆ ಕಾರಣ.

ಓ ರಾಮ, ವಿಚಾರ, ತರ್ಕ ಮತ್ತು ವಿವೇಕಗಳ ಮೂಲಕ ಈ ಜಗತ್ತೆಂಬ ಭಾವನೆಯನ್ನು ನಿನ್ನ ಮನಸ್ಸಿನಿಂದ ಸಂಪೂರ್ಣವಾಗಿ ಅಳಿಸಿಬಿಡು. ಮನಸ್ಸನ್ನು ಸ್ವಲ್ಪವೂ ಸಡಿಲಬಿಡಬೇಡ. ಅದನ್ನು ನಿಷ್ಕಾರುಣ್ಯವಾಗಿ ಬಡಿದುಹಾಕು. ಅದನ್ನು ನಿಯಂತ್ರಣದಲ್ಲಿ ಇಟ್ಟುಕೋ. ಅದನ್ನು ಹೇಳಹೆಸರಿಲ್ಲದಂತೆ ನಾಶಮಾಡು. ಆಗ ಒಡನೆ ನೀನು ಸತ್ಯವನ್ನು ಕಾಣುವೆ ಮತ್ತು ಆತ್ಯಂತಿಕ ಮೋಕ್ಷವನ್ನು ಹೊಂದುವೆ. ಆಗ ಮಾತ್ರ ಎಲ್ಲ ರೀತಿಯ ನೋವು, ದುಃಖ ಮತ್ತು ಮೋಹಗಳಿಂದ ಪಾರಾಗುವೆ.

# ಗುರುದಕ್ಷಿಣೆ

ಕಥೆ: ಮೈಥಿಲಿ ಸೀತಾರಾಮನ್

ಚಿತ್ರ : ಕೋವಿ




5
ಗುರು ಕೋಪದಿಂದ...
ಹಾಗಿದ್ದರೆ ಹದಿನಾಲ್ಕು ಕೋಟಿ ಚಿನ್ನದ ನಾಣ್ಯಗಳನ್ನು ಗುರುದಕ್ಷಿಣೆಯನ್ನಾಗಿ ಕೊಡು. ಆಗಲೇ ನಾನು ಅದನ್ನು ಸ್ವೀಕರಿಸುತ್ತೇನೆ.
6
ಅಷ್ಟೊಂದು ಚಿನ್ನದ ನಾಣ್ಯಗಳನ್ನು ನಾನು ಹೇಗೆ ಸಂಗ್ರಹಿಸಲಿ? ಇರಲಿ, ಗುರುವಿನ ಬಯಕೆಯನ್ನು ಪೂರೈಸುವುದಕ್ಕಾಗಿ ನಾನು ಏನಾದರೂ ಪ್ರಯತ್ನ ಮಾಡುತ್ತೇನೆ.
7
ಚಿಂತೆಯಿಂದ ಕದಡಿಹೋದ ಮನಸ್ಸಿನಿಂದ ಕೌತ್ಸನು ರಘು ಮಹಾರಾಜನ ಬಳಿಗೆ ಭಿಕ್ಷೆಗೆ ಹೋದ.
ರಘು ಆಗತಾನೆ ವಿಶ್ವಜಿತ್ ಎಂಬ ಯಾಗವನ್ನು ಮಾಡಿ ಮುಗಿಸಿದ್ದ. ಅವನು ತನ್ನೆಲ್ಲ ಸಂಪತ್ತನ್ನೂ ಆ ಯಾಗದ ಸಲುವಾಗಿ ದಾನ ನೀಡಿದ್ದರಿಂದ ದೇಶದ ಬೊಕ್ಕಸ ಬರಿದಾಗಿತ್ತು.
8
ಸ್ವಾಮಿ! ನಿಮ್ಮ ಆಗಮನದಿಂದ ಎಲ್ಲವೂ ಸಮೃದ್ಧಿ ಹೊಂದಲಿ. ನಿಮ್ಮ ಆಶೀರ್ವಾದದಿಂದ ನಮ್ಮ ದೇಶದ ಪ್ರಜೆಗಳೆಲ್ಲ ಚೆನ್ನಾಗಿದ್ದಾರೆ. ಹೇಳಿ ಸ್ವಾಮಿ, ನಾನೇನು ಸೇವೆ ಮಾಡಲಿ?
ಓ ರಾಜ, ನಿನಗೆ ಹಾಗೂ ನಿನ್ನ ರಾಜ್ಯಕ್ಕೆ ಒಳಿತಾಗಲಿ!
ನಾನು ತಡವಾಗಿ ಬಂದೆ. ನಿನ್ನಿಂದ ತುಸು ಭಿಕ್ಷೆ ಸ್ವೀಕರಿಸೋಣ ಎಂದು ನಾನು ಭಾವಿಸಿದ್ದೆ. ಆದರೆ ಅದು ಈಗ ಕಷ್ಟವೆಂದು ತೋರುತ್ತದೆ. ಆದ್ದರಿಂದ ನಾನಿನ್ನು ಬರುತ್ತೇನೆ.
ಇಲ್ಲ, ಋಷಿಗಳೇ! ನೀವು ಬರಿಗೈಯಲ್ಲಿ ಹೋಗಬಾರದು. ನಿಮಗೆ ಎಷ್ಟು ಸಂಪತ್ತು ಬೇಕೋ ತಿಳಿಸಿ.


9
ಕೌತ್ಸನು ತನ್ನ ಗುರುಕುಲದಲ್ಲಿ ನಡೆದ ಘಟನೆಯನ್ನೆಲ್ಲ ಮಹಾರಾಜನಿಗೆ ವಿವರಿಸಿದ. ತನಗೆ ಗುರುದಕ್ಷಿಣೆಯಾಗಿ ನೀಡಲು ಹದಿನಾಲ್ಕು ಕೋಟಿ ಚಿನ್ನದ ನಾಣ್ಯಗಳ ಅಗತ್ಯವಿರುವುದಾಗಿಯೂ ಅವನಿಗೆ ತಿಳಿಸಿದ. ರಘು ಮಹಾರಾಜನಿಗೆ ಕೌತ್ಸನ ಗುರುಭಕ್ತಿಯ ಅರಿವಾಯಿತು.
10
ಓ ಋಷಿಗಳೆ! ಅಷ್ಟೊಂದು ಮೊತ್ತದ ಸಂಪತ್ತನ್ನು ಪಡೆಯಲು ಕುಬೇರನ ಮೇಲೆ ಆಕ್ರಮಣ ಮಾಡಬೇಕಲ್ಲದೆ ಬೇರೆ ಉಪಾಯವಿಲ್ಲ.
ಬೇಡ ಮಹಾರಾಜ, ನೀನೇನೂ ತೊಂದರೆ ತೆಗೆದುಕೊಳ್ಳಬೇಡ. ನನಗಾಗಿ ನೀನು ಯುದ್ಧ ಮಾಡಬೇಕಿಲ್ಲ.
ಇಲ್ಲ; ಋಷಿಗಳ ಅಗತ್ಯವನ್ನು ಪೂರೈಸುವುದು ರಾಜನ ಕರ್ತವ್ಯ. ಮಂತ್ರಿ, ಯುದ್ಧಕ್ಕಾಗಿ ಸೈನ್ಯವನ್ನು ಸಿದ್ಧಗೊಳಿಸು!
11
ಯಕ್ಷಲೋಕದಲ್ಲಿದ್ದ ಕುಬೇರನಿಗೆ ರಘು ತನ್ನ ಮೇಲೆ ಯುದ್ಧಕ್ಕಾಗಿ ಸನ್ನಾಹ ಮಾಡುತ್ತಿರುವ ವಿಚಾರ ತಿಳಿಯಿತು.
12
ಓ ಮಂತ್ರಿ! ರಘುವಿನೊಂದಿಗೆ ಯುದ್ಧ ಮಾಡಿದರೆ ಅದು ನಮ್ಮ ಸರ್ವನಾಶವಾಗಿ ಪರಿಣಮಿಸುವುದು.
ನಿಜ ಪ್ರಭೂ. ಈ ಯುದ್ಧವನ್ನು ತಡೆಯಲು ನಾವೇನು ಮಾಡೋಣ?
ರಘುವಿನ ಬೊಕ್ಕಸದಲ್ಲಿ ಚಿನ್ನದ ಮಳೆಗರೆಯುವಂತೆ ಆಜ್ಞಾಪಿಸುತ್ತೇನೆ!
13
ಕುಬೇರನ ಆಣತಿಯಂತೆ ಅಂದು ರಾತ್ರಿ ರಘು ಮಹಾರಾಜನ ಬೊಕ್ಕಸದಲ್ಲಿ ಚಿನ್ನದ ಮಳೆ ಸುರಿಯಿತು. ಚಿನ್ನದ ನಾಣ್ಯಗಳು ಬೀಳುವ ಸದ್ದಿಗೆ ಪ್ರಜೆಗಳೆಲ್ಲ ನಿದ್ದೆಯಿಂದ ಎಚ್ಚೆತ್ತು ಓಡಿ ಬಂದರು. ಕುಬೇರ ಚಿನ್ನದ ಮಳೆಗರೆದ ಸುದ್ದಿ ಕೇಳಿದ ಜನ ತುಂಬಾ ಆನಂದಪಟ್ಟರು. ಆಗ ರಾಜ ಕುಬೇರನ ಮೇಲೆ ಯುದ್ಧ ಸಾರುವ ಆಲೋಚನೆಯನ್ನೇ ಬಿಟ್ಟ.
14
ಆಹಾ! ಇದೆಂಥ ಆಶ್ಚರ್ಯ! ಏನು ಅದ್ಭುತ!